ದಿ : **18-09-2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ:- ಪ್ರತಿವಾದಿ ಪರ ವಕೀಲರಿಂದ**

ನ್ಯಾಯಾಲಯದ ಆದೇಶದ ಮೇರೆಗೆ ಎರಡು ರಶೀದಿಗಳನ್ನು ಹಾಜರು ಮಾಡಿದ್ದೇನೆ.

ಸದರಿ ರಶೀದಿಗಳನ್ನು ಕ್ರಮವಾಗಿ **ನಿ.ಡಿ -1 ಮತ್ತು 2** ಎಂದು ಗುರುತಿಸಲಾಯಿತು.

ನಿ.ಡಿ **- 1** ಮತ್ತು **2**ಕ್ಕೆ ನಮ್ಮ ಸಿಬ್ಬಂದಿಯಾದ ಶಿವ ರೆಡ್ಡಿಯವರು ಸಹಿ ಮಾಡಿರುತ್ತಾರೆ.

ಪಾಟೀ **ಸವಾಲು :** ವಾದಿ ಪರ ವಕೀಲರಾದ ಶ್ರೀ ಎಂ.ಎಂ.ಹಚ್ ರವರಿಂದಃ

ನ್ಯಾಯಾಲಯ ನಿಗದಿ ಮಾಡಿದ ದಿನಾಂಕದಂದು ನಾನು ಹಾಜರಾಗಿಲ್ಲ ಎಂದರೆ ಸರಿ. ದಾವಾಣಗೆರೆಗೆ ಬಂದು ನನ್ನಿಂದ ಸಹಿ ಮಾಡಿಸಿಕೊಂಡಿದ್ದವರು ಈ ದಿನ ವಿಚಾರಣೆ ಇರುವುದನ್ನು ತಿಳಿಸಿರುತ್ತಾರೆ. ನನಗೆ ಸಮನ್ಸ್ ನ್ನು ಕೋರ್ಟ್ ಅಮೀನು ತಂದು ಕೊಟ್ಟಿರುತ್ತಾರೆ. ನನಗೆ ಪ್ರತಿವಾದಿಯಾದ ಮಹಮದ್ ಅಬ್ದುಲ್ ರಜಾಕ್ ರವರು ನೇರವಾಗಿ ಪರಿಚಿತರಾಗಿರುವುದಿಲ್ಲ, ಮಧ್ಯವರ್ತಿಯ ಮುಖಾಂತರ ಪ್ರತಿವಾದಿ ನನಗೆ ಪರಿಚಯವಾಗಿರುತ್ತಾನೆ, ಮಧ್ಯವರ್ತಿಯ ಹೆಸರು ನೆನಪಿಲ್ಲ. ಮೊಟ್ಟೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ಮಧ್ಯವರ್ತಿ ನನಗೆ ಪ್ರತಿವಾದಿಯನ್ನು ಸುಮಾರು 2-3 ವರ್ಷಗಳ ಹಿಂದೆ ಪರಿಚಯಸಿರುತ್ತಾನೆ. ನಾನು ಪ್ರತಿವಾದಿಯನ್ನು ಖುದ್ದಾಗಿ ಭೇಟಿಯಾಗಿರುತ್ತೇನೆ. 2021ನೇ ಸಾಲಿನಲ್ಲಿ ನಾನು ಪ್ರತಿವಾದಿಗೆ ಒಂದೇ ದಿನ ಎರಡು ವಾಹನಗಳಲ್ಲಿ ಮೊಟ್ಟೆಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದಕ್ಕೆ ಸಂಬಂಧಿಸಿದ ರಶೀದಿಗಳನ್ನು ಈ ದಿನ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ಕಳುಹಿಸಿದ ಮೊಟ್ಟೆಗೆ ಸಂಬಂಧಿಸಿದ ರೂ.10,66,965/- ಗಳು ಅದೇ ದಿನ ಅಂದರೆ ಮೊಟ್ಟೆ ಕಳುಹಿಸಿದ ದಿನದಂದೇ ನನ್ನ ಖಾತೆಗೆ ಜಮಾ ಆಗಿರುತ್ತದೆ. ಸದರಿ ಹಣವನ್ನು ವಾದಿಯು ನನ್ನ ಖಾತೆಗೆ ಜಮಾ ಮಾಡಿದ್ದೇನೆ ಎಂದರೆ ಸರಿ.

ಪ್ರಶ್ನೆ : ನೀವು ಕಳುಹಿಸಿದ ಮೊಟ್ಟೆ ಪ್ರತಿವಾದಿಗೆ ತಲುಪಿದೆಯೆ?

ಉತ್ತರ : ಪ್ರತಿವಾದಿಯ ಹುಡುಗರು ದಾವಾಣಗೆರೆಗೆ ಬಂದು ಮೊಟ್ಟೆಯನ್ನು ತೆಗೆದುಕೊಂಡು ಹೋಗಿರುತ್ತಾರೆ.

ಕುಂದಾಪುರದ ಖರಾಂತುಲ್ಲಾರವರು ಪ್ರತಿವಾದಿಯನ್ನು ನನಗೆ ಪರಿಚಯ ಮಾಡಿರುತ್ತಾರೆ. ನನ್ನ ಖಾತೆಗೆ ಜಮೆ ಆಗಿರುವ ರೂ.10,66,965/- ಗಳನ್ನು ಪಾವತಿ ಮಾಡುವಂತೆ ವಾದಿ ನನ್ನ ವಿರುದ್ಧ ದಾವೆ ಸಲ್ಲಿಸಿರುವುದಿಲ್ಲ. ವಿಜಯ ಟ್ರೇಡಿಂಗ್ ಕಂಪನಿಯ ಹೆಸರಿನಲ್ಲಿ ಬಿಲ್ ನ್ನು ತಯಾರಿಸುವಂತೆ ಖರಾಂತುಲ್ಲಾರವರು ನನಗೆ ಹೇಳಿರುತ್ತಾರೆ. ಸಾಮಾನ್ಯವಾಗಿ ಯಾರು ನನಗೆ ಹಣ ನೀಡುತ್ತಾರೋ ಅವರ ಹೆಸರಿಗೆ ಬಿಲ್ ಬರೆಯುತ್ತೇನೆ ಎಂದರೆ ಸರಿ.

ವಿಜಯ ಟ್ರೇಡಿಂಗ್ ಕಂಪನಿಯವರು ಗುಜರಿ ಸಾಮೂನುಗಳ ವ್ಯಾಪಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಜಯ ಟ್ರೇಡಿಂಗ್ ಕಂಪನಿಯವರು ನನ್ನಿಂದ ಮೊಟ್ಟೆಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಖರಾಂತುಲ್ಲಾರವರು ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನಾನು ಖರಾಂತುಲ್ಲಾ ಮತ್ತು ಪ್ರತಿವಾದಿಯ ಪ್ರೇರೆಪಣೆ ಮೇರೆಗೆ ಈ ದಿನ ಹಾಜರಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**